

# ವಿಡಿಯೋ ಕಾಲ್

ಸಂಡೇ ಬಂದರೆ ಸಾಕು ಅಪ್ಪನ ಮಂಡೆ
ಬಿಸಿಯೇರುವುದು ತಪ್ಪಲ್ಲ
ಪೂರ್ವಿಯ ಕಾಟ ಒಂದೇ ಸಮನೆ
ಅಲ್ಲಿಗೆ ಇಲ್ಲಿಗೆ ಎಂದರೆ ಒಪ್ಪಲ್ಲ

ಸುಮ್ಮನೆ ಬಾಪ್ಪ ತಾತನ ಮನೆಗೆ
ನೀಡಿದಳವಳು ಆದೇಶ
ಅಪ್ಪ ಅಮ್ಮ ನಡೆದರು ತೆಪ್ಪಗೆ
ತಡೆಯುವುದಾಗದು ಪೂರ್ವಿ ಪಾಪು ಆವೇಶ!

ದಿವಾನ ಖಾನೆಯ ಗೋಡೆಯ ಉದ್ದಕು
ತೂಗಿವೆ ಹಿರಿಯರ ಚಿತ್ರದ ಕಟ್ಟು
ಇವರೇ ನನ್ನ ಅಪ್ಪ ಅಮ್ಮ ಎಂದನು ತಾತ
ಒಂದೊಂದಕ್ಕೂ ಬೆರಳಿಟ್ಟು

ಎಲ್ಲಿದ್ದಾರೆ ಇಬ್ಬರು ಅವರು
ನೋಡಲೆಬೇಕು ನಾನು
ಪೂರ್ವಿಯು ಕೇಳಲು ತಾತನ ಉತ್ತರ
"ಸೇರಿದ್ದಾರೆ ದೇವರನು"

ಥಟ್ಟನೆ ಪೂರ್ವಿ ಹೇಳಿಯೆ ಬಿಟ್ಟಳು
''ಅವರಿಗೆ ಈಗಲೆ ಮಾಡು ಫೋನು
ಕರೆಯುವೆನಿಲ್ಲಿಗೆ ಇಬ್ಬರ ಕೂಡ
ಆಡಲುಬೇಕು ನಾನು

ಆಡಿಯೊ ಬೇಡ ಬರಿ ಮಾತೇಕೆ
ವಿಡಿಯೊ ಕಾಲೇ ಇರಲಿ
ನೋಡುತಲವರನು ಹಾಯ್ ಹಾಯ್ ಹೇಳುವೆ
ಮಾತನು ಮುಗಿಸುವೆ ಬಾಯ್ ಬಾಯ್ ಹೇಳಿ!"